Sri Mulka GOVINDA REDDY.—The Hon'ble Minister was pleased to quote an Act under which he was not in a position to give the answer asked for. I am repeating the same question and telling him that under such and such an Act, the Hon'ble Minister was obliged to take action and what the Hon ble Minister or Government did was irregular and illegal.

Sri S. GOPALA GOWDA.—Just now, the Hon'ble Minister was pleased to state that some of the demands were suitably implemented. Will the Government be pleased to state what were those demands that they have suitably implemented ?

Dr. R. NAGAN GOWDA.— Now, I would like to have notice for giving details.

Sri S. GOPALA GOWDA.—Will the Minister be pleased to place those details on the table of the House, Sir ?

Dr. R. NAGAN GOWDA.—It will be considered. The demands that were made by the Union on the Government during the course of a long period of 18 months were all suitably considered.

ಶ್ರೀ ಜಿ. ಶಿವಪ್ಪ.—ನಮ್ಮ ಪಕ್ಷದ ನಾಯಕರು ಮತ್ತು ಕಾಂಗ್ರೆಸ್ ಅಧ್ಯಕ್ಷರ ಸಹೃದಯ ಪ್ರಯತ್ನದಿಂದ ಈ ಒಪ್ಪಂದ ಆಯಿತು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ತಮ್ಮ ಪ್ರಶ್ನೆಯನ್ನು ಪುನಃ ಹಾಕಿ.

ಶ್ರೀ ಜಿ. ಶಿವಪ್ಪ.—ಈ ಸಭೆಯ ನಾಯಕರ ಮತ್ತು ಕಾಂಗ್ರೆಸ್ ಅಧ್ಯಕ್ಷರ ಒಂದು ಒಳ್ಳೆಯ ಪ್ರಯತ್ನದಿಂದ ಈ ಮುಷ್ಕರ ಮುಕ್ತಾಯಗೊಂಡು ಒಪ್ಪಂದಕ್ಕೆ ಬಂದರು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—I do not allow that question. It does not relate to this question.

Artificial Insemination Centres

Q.—305. Sri G. SIVAPPA (Holalkere).—

Will the Government be pleased to state :—

(*a*) the number of artificial insemination centres working in the State;

(*b*) the amount of money spent over the Scheme ?

A.—Dr. R. NAGAN GOWDA (Minister for Agriculture).—

(*a*) 11.

(*b*)

1953-54	*1954-55*
Rs. 6,550	Rs. 18,900

ಶ್ರೀ ವಿ. ಆರ್. ನಾಯ್ಡು.—I rise to a point of order. ಇದು ಕೃತಕ ರೀತಿಯಲ್ಲಿ ಗರ್ಭಧಾರಣೆ ಮಾಡಿಸುವ ಕೇಂದ್ರಗಳಿಗೆ ಸಂಬಂಧಪಟ್ಟ ಪ್ರಶ್ನೆ. ಇದು ಭಯಂಕರವಾದ ಪ್ರಶ್ನೆ.

Mr. SPEAKER.—There is no point of order.

ಶ್ರೀ ಜಿ. ಶಿವಪ್ಪ.—ಕೇಂದ್ರ ಸರ್ಕಾರದಿಂದ ಈ ಕೇಂದ್ರಗಳಿಗೆ ಯಾವ ರೂಪದಲ್ಲಿ ಸಹಾಯ ಬರುತ್ತಿದೆ ?

Dr. R. NAGAN GOWDA.—I want notice for that.

ಶ್ರೀ ಜಿ. ಶಿವಪ್ಪ.—ಈ ಕೃತಕ ರೀತಿಯಲ್ಲಿ ಗರ್ಭಧಾರಣೆ ಮಾಡಿಸುವ ಕೇಂದ್ರಗಳು ಯಾವ ರೀತಿ ಕೆಲಸ ಮಾಡುತ್ತಿವೆ ?

ಡಾ॥ ಆರ್. ನಾಗನಗೌಡ.—ಚೆನ್ನಾಗಿ ಕೆಲಸ ಮಾಡುತ್ತಿವೆ.

ಶ್ರೀ ಜಿ ಶಿವಪ್ಪ.—ಈ ಕೇಂದ್ರಗಳ ಕೆಲಸ ಸಮರ್ಪಕವಾಗಿದ್ದರೆ, ಇನ್ನೂ ಹೆಚ್ಚಿಗೆ ಇಂಥ ಕೇಂದ್ರಗಳನ್ನು ಸಂಸ್ಥಾನಾದ್ಯಂತ ತೆರೆಯುತ್ತೀರಾ ?

ಡಾ॥ ಆರ್. ನಾಗನಗೌಡ.—ಅದೇ ಸರ್ಕಾರದ ಉದ್ದೇಶ.

Sri G. SIVAPPA.—Is there any artificial insemination centre in Chitaldrug District ?

Dr. R. NAGAN GOWDA.—I am not sure. If there is not one, we will certainly have one there.

ಶ್ರೀ ಜಿ. ಶಿವಪ್ಪ.—ಇಂಥ ಕೇಂದ್ರಗಳನ್ನು ಏರ್ಪಾಡು ಮಾಡಬೇಕೆಂದು Planning Commission ನವರು ಏನಾದರೂ ಹೇಳಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—Artificial insemination centresನ್ನು ಕ್ರಮೇಣ ಎಲ್ಲಾ ಕಡೆ ಗಳಲ್ಲಿಯೂ ಏರ್ಪಾಡಿಸಬೇಕೆಂಬುದೇ ಸರ್ಕಾರದ ಉದ್ದೇಶ. ಅದಕ್ಕೆ ಸರಿಯಾಗಿ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ. ಶಿವಪ್ಪ.—ಈಗಿರತಕ್ಕಂಥ ತಳಿ ಯಾವ ಮಟ್ಟದಲ್ಲಿದೆ ಎಂಬುದನ್ನು ಸರ್ಕಾರವು ಪರೀಕ್ಷೆ ಮಾಡಿದೆಯೇ ?

Dr. R. NAGAN GOWDA.—The results of artificial insemination have always been very good. They are true to type and the results are of a higher percentage than with natural insemination.

ಶ್ರೀ ಪಿ. ಮಾಸಿಯಪ್ಪ.—ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನಲ್ಲಿ ಒಂದು ಕೃತಕ ರೀತಿಯಲ್ಲಿ ಗರ್ಭಧಾರಣ ಮಾಡಿಸುವ ಕೇಂದ್ರವನ್ನು ಪ್ರಾರಂಭ ಮಾಡಬೇಕು ಎಂಬುದರ ಬಗ್ಗೆ ವ್ಯವಹಾರ ನಡೆದು ಅದಕ್ಕೋಸ್ಕರ Local Bodies ಅಂದರೆ Municipality ಮತ್ತು District Boardಸವರು ಅವರವರ ಭಾಗದ quota ಕೊಡಬೇಕು ಎಂದು ಕೇಳಿಕೊಂಡು, District Boardನವರು ತಮ್ಮ quotaವನ್ನು

(ಶ್ರೀ ವಿ. ಮಸಿಯಪ್ಪ.)

ಕೊಟ್ಟು, ಮುನಿಸಿಪಾಲಿಟಿಯವರು ತಮ್ಮ ಭಾಗದ ಒಂದು ಸಾವಿರ ರೂಪಾಯಿ ಕೊಡುವುದಕ್ಕೆ -ಒಂದು ನಿರ್ಣಯಮಾಡಿ ಕಳುಹಿಸಿಕೊಟ್ಟು ಈಗ ಸರ್ಕಾರದಲ್ಲಿ ಅದು ಬಹಳ ಕಾಲದಿಂದಲೂ ನಿಂತುಹೋಗಿರುವುದು ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ನಾನು ಅದನ್ನು ವಿಚಾರಿಸುತ್ತೇನೆ

ಶ್ರೀ ವಿ. ಮಸಿಯಪ್ಪ.—ಆದಷ್ಟು ಜಾಗ್ರತೆ ಅದನ್ನು ಮಂಜೂರುಮಾಡಿ ಆಲ್ಲಿ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಬರುವ ವರ್ಷ ಚಿತ್ರದುರ್ಗದಲ್ಲಿ ಒಂದು ಕೇಂದ್ರವನ್ನು ಪ್ರಾರಂಭ ಮಾಡಬೇಕೆನ್ನುವುದು ಯೋಜನೆಯಲ್ಲಿದೆ.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಕೃತಕವಾದ ಗರ್ಭಧಾರಣೆ ಪ್ರಯೋಗವನ್ನು ಉತ್ತಮವಾದ ರಾಸುಗಳಿರತಕ್ಕಂಥ ಸ್ಥಳಗಳಲ್ಲಿ ರೈತರು ಪಡೆಯುವುದಕ್ಕೆ ಹಿಂಜರಿಯುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಕೆಲವು ಕಡೆ ಹಾಗೆ ಹಿಂಜರಿಯುತ್ತಿದ್ದಾರೆ. ಕೆಲವು ಕಡೆ ಬಹಳ ಉತ್ಸಾಹದಿಂದ ಮುಂದೆಬಂದು ಇದನ್ನೇ ಉಪಯೋಗ ಮಾಡುತ್ತಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಹಳ್ಳಿಕಾರು, ಗುಡ್ಡುಮಾವು ಮತ್ತು ಅಮೃತಮಹಲ್—ಈ ಜಾತಿಯ ದನಗಳು ಇರತಕ್ಕ ಸ್ಥಳಗಳಲ್ಲಿ ನೀವು ಹೇಳಿರತಕ್ಕ artificial inseminationನ್ನನ್ನು ತೆಗೆದುಕೊಳ್ಳುವುದಕ್ಕೆ ಒಪ್ಪುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನ ಗೌಡ.—ಜನರ ಒಪ್ಪಿಗೆಯಿಲ್ಲದಿದ್ದರೆ ಅಂಥ ಕಡೆಗಳಲ್ಲಿ ಇದನ್ನು ಮಾಡುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ—ಹೋರಿಗಳನ್ನು ಕಣ್ಣಿನಿಂದ ನೋಡಿದ ಹೊರತು ಇಂಥ ಪ್ರಯೋಗವನ್ನು ಪಡೆಯುವುದಕ್ಕೆ ಜನರು ಒಪ್ಪುವುದಿಲ್ಲ. ಆದ್ದರಿಂದ ಅಂಥ ಸ್ಥಳಗಳಲ್ಲಿ ಹೋರಿಗಳನ್ನು ಒದಗಿಸಲಿಕ್ಕೆ ಏರ್ಪಾಡು ಮಾಡುತ್ತೀರಾ ?

Mr. SPEAKER.—That is a different question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೋರಿಗಳನ್ನೀಗ ತಾವು ಇಟ್ಟಿದ್ದೀರಲ್ಲಾ ಅವು ಒಳ್ಳೆಯ Pedigree Bullಗಳೇ, ಆ ಬಗ್ಗೆ ರಿಕಾರ್ಡ್ ಇಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—Pedigree Bull ಗಳೇ ಎಂದು ಹೇಳುವುದಕ್ಕೆ ಕಷ್ಟ. ಇನ್ನು ಮೇಲೆ ಅವುಗಳ ಬಗ್ಗೆ ರಿಕಾರ್ಡ್ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಾದರೆ ಇದುವರೆಗೆ insemination ನಡೆಸಿರುವುದರಲ್ಲ ರೈತರಿಗೆ ಅನ್ಯಾಯವಾಗಿದೆಯೆಂದು ಹೇಳಬಹುದೇ ?

ಡಾ॥ ಆರ್. ನಾಗನಗೌಡ.—ಹಾಗೆ ಹೇಳುವುದಕ್ಕಾಗುವುದಿಲ್ಲ. ಎಲ್ಲವನ್ನೂ ಪರಿಶೀಲನೆ ಮಾಡಿ, ಹೋರಿ ಉತ್ತಮ ತಳಿಯದು ಎಂದು ತಿಳಿದಮೇಲೆಯೇ ಅದರ ಉಪಯೋಗ ಪಡೆಯುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇದರಿಂದ ನೀವು ಹಾಲಿನ ಉತ್ಪತ್ತಿಯನ್ನು ಉತ್ತಮಪಡಿಸಬೇಕೆಂದು ಪ್ರಯತ್ನಪಟ್ಟಿರುವಿರಾ ? ಅಥವಾ ಹೋರಿ ಕರುಗಳ ತಳಿಗಳನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—ಹಳ್ಳಿಕಾರು ಜಾತಿಯ ಹೋರಿಗಳನ್ನು ಒಳ್ಳೆಯ draught animals ಹೆಚ್ಚುಮಾಡುವುದಕ್ಕೂ, ಸಿಂಧಿ ಹೋರಿಗಳನ್ನು ಹಾಲಿನ ಉತ್ಪತ್ತಿ ಜಾಸ್ತಿಮಾಡುವುದಕ್ಕೂ ಉಪಯೋಗಿಸುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡಿನ ಕಡೆ ಈಗ ಸಿಂಧಿ ಹೋರಿಗಳನ್ನು ಪ್ರಯೋಗಮಾಡಿ ಹುಟ್ಟಿರುವ ಕರುಗಳನ್ನು ನೋಡಿ result ಏನೆಂಬುದನ್ನು ಪರಿಶೀಲಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಮಲೆನಾಡಿನ ಪ್ರಾಂತ್ಯದಲ್ಲಿ ಎರಡು-ಮೂರು ಸ್ಥಳಗಳಲ್ಲಿ ಸಿಂಧಿ ಹೋರಿಗಳನ್ನು ಉಪಯೋಗಮಾಡಿ ನೋಡಿದ್ದೇವೆ. ಶಿವಮೊಗ್ಗ ಮತ್ತು ಸೌತ್ ಕೆನರಾದಲ್ಲಿ ಉಪಯೋಗಿಸಿದ್ದಾರೆ. ಇಂದಿನವರೆಗೆ ಫಲತಾಂಶಗಳು ಚೆನ್ನಾಗಿದೆಯೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಲಕ್ಕಪ್ಪ.—ಹಾನಗಲದಲ್ಲಿ ಈ ರೀತಿಯ insemination ಕೇಂದ್ರವನ್ನು ತೆರೆಯುವುದಕ್ಕೆ ವ್ಯವಸ್ಥೆಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ಪ್ರಯತ್ನದಲ್ಲಿದ್ದೇವೆ. ಇಷ್ಟರಲ್ಲೇ ಮಾಡಬೇಕೆಂದಿದೆ.

Land Grant to the Landless (Policy).

Q.—210. Sri T. HANUMAIYA (Hiriyur-Scheduled Castes).—

Will the Government be pleased to state :—

what is the policy of Government in sanctioning lands to landless and land-holders in the State ?

A.—Sri Kadidal MANJAPPA (Minister for Revenue and Public Works).—

The policy of Government is to grant lands to landless and *bona fide* agriculturists and insufficient holders owning less than five acres of dry land or two acres of wet or garden land at an upset price. The cases of applicants who own more than two acres of wet or five acres of dry land will be considered on merits.

ಶ್ರೀ ಟಿ. ಹನುಮಯ್ಯ.—ಈ ರೀತಿ ಐದು ಎಕರೆ ಖುಷ್ಕಿ ಮತ್ತು ಎರಡು ಎಕರೆ ತರೀ ಜಮೀನನ್ನು ಒಂದೊಂದು ಕುಟುಂಬಕ್ಕೆ ಕೊಡಬೇಕೆಂದು ಹೇಳಿದ್ದೀರಿ. ಮೈಸೂರು ದೇಶದ ಎಲ್ಲಾ ಕಡೆಯೂ ಈ ರೀತಿ ನಿಗದಿ ಮಾಡಿದ್ದೀರೋ ಅಥವಾ ಎಲ್ಲಯೋ ಕೆಲವು ಕಡೆ ಮಾತ್ರ ಮಾಡಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಮೈಸೂರು ಸಂಸ್ಥಾನದ ಎಲ್ಲ ಕಡೆಗೂ ಅನ್ವಯಿಸುತ್ತದೆ.

ಶ್ರೀ ಟಿ. ಹನುಮಯ್ಯ.—ಯಾವ ಆಧಾರದ ಮೇಲೆ ಐದು ಖುಷ್ಕಿ ಮತ್ತು ಎರಡು ಎಕರೆ ಇರಬೇಕೆಂದು ನಿರ್ಧರ ಮಾಡಿದ್ದೀರಿ ?